## ಸಿನಿರಂಜನಿ




### ತುಮಕೂರು
ಜೈ ಭಾರತ್: ಅಜ್ಞಾತವಾಸಿ (ತೆಲುಗು 4)
ಗಾಯತ್ರಿ: ಬೃಹಸ್ಪತಿ (ಕನ್ನಡ-4ಆಟ)
ಪ್ರಶಾಂತ್:ಮಫ್ತಿ (ಕನ್ನಡ -4)
ಮಾರುತಿ:ಚಮಕ್ (ಕನ್ನಡ-4)
ಕೃಷ್ಣ: ಅಂಜನಿ ಪುತ್ರ (ಕನ್ನಡ-4)

### ಮಧುಗಿರಿ
ಶಂಕರ್ :ಅಜ್ಞಾತವಾಸಿ (ತೆಲುಗು -4)
ಶಾಂತಲಾ: ಅಂಜನಿಪುತ್ರ (ಕನ್ನಡ -4)

### ಕೊರಟಗೆರೆ
ಶಿವಗಂಗ: ಅಂಜನಿಪುತ್ರ (ಕನ್ನಡ-4 ಆಟ)

### ಪಾವಗಡ
ಶ್ರೀನಿವಾಸ್:ಅಜ್ಞಾತವಾಸಿ (ತೆಲುಗು-4)
ಮಾರುತಿ:ಅಂಜನಿಪುತ್ರ(ಕನ್ನಡ -3)
ಅಲಂಕಾರ್: ಜೈಸಿಂಹ (ತೆಲುಗು-3)

### ಕುಣಿಗಲ್
ಆಕಾಶ್:ಅಂಜನಿಪುತ್ರ (ಕನ್ನಡ-4)

### ಗುಬ್ಬಿ
ಚನ್ನಬಸವೇಶ್ವರ: ಅಂಜನಿಪುತ್ರ (ಕನ್ನಡ-4)

### ಸಿರಾ
ಸಪ್ತಗಿರಿ: ಅಂಜನಿಪುತ್ರ (ಕನ್ನಡ-4 ಆಟ)
ರಂಗನಾಥ:ಅನ್ವೇಷಿ (ಕನ್ನಡ-4)
ಭಾಗ್ಯಲಕ್ಷ್ಮೀ:ಚಮಕ್(ಕನ್ನಡ-4)

### ತುರುವೇಕೆರೆ
ಪೂರ್ಣಿಮಾ:ಚಮಕ್ (ಕನ್ನಡ-4)
ಕೃಷ್ಣ: ಮಫ್ತಿ (ಕನ್ನಡ-4)

### ತಿಪಟೂರು
ತ್ರಿಮೂರ್ತಿ:ಮಫ್ತಿ (ಕನ್ನಡ-4)
ಗಣೇಶ್: ಅಂಜನಿಪುತ್ರ (ಕನ್ನಡ-4)
ಶ್ರೀಲಕ್ಷ್ಮೀ:ಅಜ್ಞಾತವಾಸಿ (ತೆಲುಗು -4)

### ಹುಳಿಯಾರು
ಬಾಲಾಜಿ: ಅಂಜನಿಪುತ್ರ (ಕನ್ನಡ-4 ಆಟ)

### ಚಿಕ್ಕನಾಯಕನಹಳ್ಳಿ
ಲಕ್ಷ್ಮೀನರಸಿಂಹ: ಅಂಜನಿಪುತ್ರ (ಕನ್ನಡ-4)
ಶ್ರೀನಿವಾಸ:ಚಮಕ್ (ಕನ್ನಡ -4)

# ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ಗುಬ್ಬಿ

ಕ್ಷೇತ್ರದ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಈಗಾಗಲೇ ಕ್ಷೇತ್ರದಾದ್ಯಂತ ವಿವಿಧ ಯೋಜನೆಯಡಿ ಗ್ರಾಮ ಸಂಪರ್ಕ ರಸ್ತೆಗಳು ಮತ್ತು ಎಸ್‌ಸಿ., ಎಸ್‌ಟಿ ಕಾಲೊನಿಗಳಿಗೆ ಉತ್ತಮ ಗುಣಮಟ್ಟದ ಸಿಸಿ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ ಎಂದು ಶಾಸಕ ಎಸ್.ಆರ್ ಶ್ರೀನಿವಾಸ್ ತಿಳಿಸಿದರು.

ತಾಲ್ಲೂಕಿನ ಹೊದಲೂರು ಗ್ರಾಮದಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹೇಮಾವತಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯಿಂದ 2.78 ಕೋಟಿ ರೂ ವೆಚ್ಚದಲ್ಲಿ ಹೊದಲೂರು ಸೇರಿದಂತೆ ಅತ್ತಿಕಟ್ಟೆ ಮತ್ತು ಎನ್.ರಾಂಪುರ ಗ್ರಾಮಗಳಲ್ಲಿ ಸುಸಜ್ಜಿತವಾದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈವರೆಗೆ ಪ್ರಾರಂಭಿಸಿರುವ ಎಲ್ಲಾ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು.

ಕ್ಷೇತ್ರದ ಗ್ರಾಮೀಣ ಭಾಗದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು ಮತ್ತು ಗ್ರಾಮ ಸಂಪರ್ಕ ರಸ್ತೆಗಳ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದು ಅತ್ಯವಶ್ಯಕವಾದ ಗ್ರಾಮ ಸಂಪರ್ಕ ರಸ್ತೆಗಳನ್ನು ವಿವಿಧ ಯೋಜನೆಯಡಿ ಅಭಿವೃದ್ಧಿಗೊಳಿಸಲಾಗುತ್ತಿದೆ ಎಂದು ತಿಳಿಸಿದ ಅವರು ಅತ್ತಿಕಟ್ಟೆಗೇಟ್ ನಿಂದ ಗಂಗಸಂದ್ರ ಗೇಟ್ ವರೆಗೂ ಡಾಂಬರ್ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದ್ದು, ಗುತ್ತಿಗೆದಾರರು ಮತ್ತು ಎಂಜಿನಿಯರ್‌ಗಳು ಉತ್ತಮ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು.

*ಗ್ರಾಮೀಣ ಭಾಗದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು ಮತ್ತು ಗ್ರಾಮ ಸಂಪರ್ಕ ರಸ್ತೆಗಳ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದು, ಅತ್ಯವಶ್ಯಕವಾದ ಗ್ರಾಮ ಸಂಪರ್ಕ ರಸ್ತೆಗಳನ್ನು ವಿವಿಧ ಯೋಜನೆಯಡಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಅತ್ತಿಕಟ್ಟೆಗೇಟ್ ನಿಂದ ಗಂಗಸಂದ್ರ ಗೇಟ್‌ವರೆಗೂ ಡಾಂಬರ್ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದ್ದು, ಗುತ್ತಿಗೆದಾರರು ಮತ್ತು ಎಂಜಿನಿಯರ್‌ಗಳು ಉತ್ತಮ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಶಾಸಕ ಎಸ್. ಆರ್ ಶ್ರೀನಿವಾಸ್ ತಿಳಿಸಿದರು.*



*ಗುಬ್ಬಿ ತಾಲ್ಲೂಕಿನ ಹೊದಲೂರು ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಶಾಸಕ ಎಸ್.ಆರ್.ಶ್ರೀನಿವಾಸ್ ಗುದ್ದಲಿ ಪೂಜೆ ನೆರವೇರಿಸಿದರು.*

ಕಳೆದ ಮೂರು ಅವಧಿಯಲ್ಲಿ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ವಿವಿಧ ಯೋಜನೆಯಡಿ ಹಲವಾರು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಕೆಲವರು ಕ್ಷೇತ್ರದಲ್ಲಿ ಯವುದೇ ಅಭಿವೃದ್ಧಿ ಯಾಗಿಲ್ಲ ಎಂದು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಅವರು ಕ್ಷೇತ್ರದಲ್ಲಿ ಸುತ್ತಾಡಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ವೀಕ್ಷಿಸಲಿ ಆಗ ಅರ್ಥವಾಗುತ್ತದೆ. ಅಭಿವೃದ್ಧಿ ಬಗ್ಗೆ ಸಮರ್ಪಕವಾದ ಮಾಹಿತಿಗಳನ್ನು ಪಡೆಯದೆ ಮನಬಂದಂತೆ ಹೇಳಿಕೆ ನೀಡುವುದು. ಅವರ ಘನತೆಗೆ ತಕ್ಕುದ್ದಲ್ಲ ಎಂದ ಅವರು ಕ್ಷೇತ್ರದ ಸರ್ವತೋಮುಖ ಪ್ರಗತಿಗೆ ಹಲವು ಮಹತ್ವ ಪೂರ್ಣ ಯೋಜನೆಗಳನ್ನು ರೂಪಿಸಲಾಗಿದ್ದು, ಸರಕಾರದಿಂದ ಬರುವಂತಹ ಅನುದಾನವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಂಡು ತಾಲ್ಲೂಕಿನಲ್ಲಿನ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಅಲ್ಲದೆ ಪಟ್ಟಣದ ಎಲ್ಲಾ ವಾರ್ಡ್‌ಗಳಲ್ಲಿಯು ರಸ್ತೆ ರಸ್ತೆ ಅಭಿವೃದ್ಧಿ ಮತ್ತು ಚರಂಡಿಗಳನ್ನು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಸದಸ್ಯೆ ನವ್ಯಬಾಬು, ತಾ.ಪಂ ಸದಸ್ಯ ದೇವರಾಜು, ಗ್ರಾ.ಪಂ ಅಧ್ಯಕ್ಷರಾದ ಲಕ್ಷ್ಮಿದೇವಮ್ಮ, ಪಾಲಕ್ಷಮ್ಮ, ಉಪಾಧ್ಯಕ್ಷ ಪುಟ್ಟಸೋಮಯ್ಯ, ಯುವ ಜೆಡಿಎಸ್ ಅಧ್ಯಕ್ಷ ವೆಂಕಟೇಶ್ ಮುಖಂಡರಾದ ಹೊದಲೂರು ವಿಜಯ್ ಕುಮಾರ್, ಹಾರನಹಳ್ಳಿ ಪ್ರಭಣ್ಣ, ಸ್ವಾಮಿ, ರಾಜಮ್ಮ, ಸೋಮಸುಂದರ್, ಶಿವಪ್ಪ, ಗುತ್ತಿಗೆದಾರ ನವೀನ್ ಕುಮಾರ್, ಎಂಜಿನಿಯರ್ ನಾಗರಾಜು ಇತರರು ಭಾಗವಹಿಸಿದ್ದರು.

## ಪುರುಷ ಸೂಕ್ತ ಪಾರಾಯಣ-ಉಪನ್ಯಾಸ



ತುಮಕೂರು

ತುಮಕೂರು ಜಿಲ್ಲಾ ಬ್ರಾಹ್ಮಣ ಸಭಾದ ಅಂಗ ಸಂಸ್ಥೆಯಾದ, ತುಮಕೂರು ವಿಪ್ರ ಯುವ ವೇದಿಕೆಯ ವತಿಯಿಂದ ಇತ್ತೀಚೆಗೆ ಬ್ರಾಹ್ಮಣ ಸೇವಾ ಸಂಘ ಬಿ.ಆರ್. ರಸ್ತೆ, ಇಲ್ಲಿ ಪುರುಷ ಸೂಕ್ತ ಪಾರಾಯಣ ಹಾಗೂ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮಕ್ಕೆ ಸುಮಾರು 200 ಕ್ಕೂ ಹೆಚ್ಚು ವಿಪ್ರರು, ಪಂಡಿತರು ಹಾಗೂ ಪುರೋಹಿತರು ಆಗಮಿಸಿ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದರು. ಕಾರ್ಯಕ್ರಮದಲ್ಲಿ ವೇ.ಬ್ರ.ಶ್ರೀ ರಾಮಸ್ವಾಮಿ ಐಯ್ಯಂಗರ್ ಹಾಗೂ ಅವರ ಸಂಗಡಿಗರು ಸೂಕ್ತದ ಪಾರಾಯಣ ನೆಡೆಸಿಕೊಟ್ಟರು. ಅಂದು ಹೆಸರಾಂತ ವಾಗ್ಮಿಗಳಾದ ಎಮ್.ಕೆ.ನಾಗರಾಜ್ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಿಕೊಟ್ಟು, ಸಭಿಕರು ಕೇಳಿದ ಪ್ರಶ್ನೆಗಳಿಗೆ ಸಮಂಜಸ ಉತ್ತರ ನೀಡಿದರು. ತಮ್ಮ ಉಪನ್ಯಾಸದಲ್ಲಿ ಬ್ರಾಹ್ಮಣರು ತಮ್ಮ ದೈನಂದಿನ ಚಟುವಟಿಕೆಗಳಾದ ಸ್ನಾನ, ಸಂಧ್ಯಾವಂದನೆ, ದೇವತಾಚರಣೆಯನ್ನು ಬಿಡದೆ ಮಾಡಿದಲ್ಲಿ ನಮ್ಮ ಎಲ್ಲಾ ಸಂಕಲ್ಪಗಳು ಈಡೇರುವುದೆಂದು ತಿಳಿಸಿದರು. ಪುರುಷ ಸೂಕ್ತದ ಬಗ್ಗೆ ಇರುವ ಕೆಲವು ತಪ್ಪು ತಿಳುವಳಿಕೆಗಳನ್ನು ಸಭಿಕರಿಗೆ ಮನವರಿಕೆ ಮಾಡಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಶ್ರೀ ನಾಗರಾಜ್ ರಾವ್ ಮಾತನಾಡಿ, ಬ್ರಾಹ್ಮಣರು ಸಂಘಟಿತರಾಗುವ ಅವಶ್ಯಕತೆಯಿದೆ ಎಂದು ತಿಳಿಸಿ, ವಿಪ್ರರು ಸಭಾದ ಎಲ್ಲಾ ಕಾರ್ಯಕ್ರಮಗಳಿಗೂ ಸಹಕಾರ ನೀಡಬೇಕೆಂದು ತಿಳಿಸಿದರು.

**ಪ್ರಜಾಪ್ರಗತಿ ಓದಿರಿ ಪ್ರಗತಿ ಟಿವಿ ವೀಕ್ಷಿಸಿ**

# ಉತ್ತಮ ಯೋಚನೆಗಳಿಂದ ಮಾನಸಿಕ ಸದೃಢ ಸಾಧ್ಯ

ತುಮಕೂರು

ವೇದಗಳಿಂದ ಜನಿಸಿದೆ ಎನ್ನಲಾಗಿರುವ ನಾಟ್ಯವೇದದಲ್ಲಿ ಮನುಷ್ಯನ ಜೀವನದಲ್ಲಿ ಸಂಭವಿಸುವ ಉತ್ತಮ ಯೋಚನೆಗಳ ಹಾಗೂ ದೈವಿಕ ಭಾವನೆಯ ಚಿಂತನೆಗಳು ಅಡಕ ವಾಗಿದ್ದು ನೃತ್ಯವನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಇಂತಹ ಚಿಂತನೆಯಲ್ಲಿ ತೊಡಗಿದ್ದು ಅವರು ಮಾನಸಿಕವಾಗಿ ಸುಂದರ ಹಾಗೂ ಸದೃಢರಾಗುತ್ತಾರೆ ಎಂದು ವಿದುಷಿ ರೂಪಶ್ರೀ ಮಧುಸೂದನ್ ಅಭಿಪ್ರಾಯ ಪಟ್ಟರು.

ನಗರದ ವಿದ್ಯಾನಗರ ದಲ್ಲಿರುವ ಶ್ರೀ ಸಾಯಿರಾಮನ್ ನೃತ್ಯ ಕೇಂದ್ರದಲ್ಲಿ ಭರತನಾಟ್ಯ ಶಾಸ್ತ್ರ ಕಾರ್ಯಾಗಾರ 'ನಾಯಿಕಾ ಪ್ರಕರಣ ಕಾರ್ಯಾ ಗಾರದಲ್ಲಿ ಭಾಗವಹಿಸಿದ್ದ ಅವರು, ನಾಟ್ಯಶಾಸ್ತ್ರದಲ್ಲಿ ವಿವರಿಸಲ್ಪಟ್ಟ ನಾಯಕ ಹಾಗೂ ನಾಯಕಿಯ ಪ್ರಬೇಧಗಳನ್ನು ಸವಿಸ್ತಾರವಾಗಿ ತಿಳಿಸಿದರು.

ನವರಸಗಳಲ್ಲಿ ಮುಖ್ಯ ವಾದ ರಸ 'ಶೃಂಗಾರ ರಸ. ಶೃಂಗಾರವನ್ನು ರಸಗಳ ರಾಜ ಎಂದು ಕರೆಯುತ್ತಾರೆ. ಆದರೆ ನರ್ತಕ, ನರ್ತಕಿಯರು ವೇದಿಕೆ ಮೇಲೆ ನರ್ತಿಸುವಾಗ ಸಂಕುಚಿತ ಭಾವನೆಯಿಂದ ಗಂಡು ಮತ್ತು ಹೆಣ್ಣಿನ ನಡುವಿನ ಪ್ರೀತಿ ಎಂದಷ್ಟೇ ಅರ್ಥೈಸುತ್ತಿರುವುದು ಸಮಂಜಸವಲ್ಲ, ಉಪ ನಿಷತ್ತು ವಾಕ್ಯದಂತೆ ಸತಿಯ ಆಲಿಂಗನದಲ್ಲಿ ಜಗತ್ತನ್ನು ಮರೆತ ನಾಯಕನಂತೆ ಪರಮಾತ್ಮನ ಚಿಂತನೆಯಲ್ಲಿ ತೊಡಗಿ ಜಗತ್ತನ್ನು ಮರೆಸುವ ಕಲೆಯೇ ನಾಟ್ಯಕಲೆ ಹಾಗಾಗಿ ಶೃಂಗಾರ ಅಭಿನಯದಲ್ಲಿ ಚತುರ್ವಿದ ಪುರುಷಾರ್ಥಗಳನ್ನು ಪ್ರತಿಬಿಂಬಿಸುವ ನೃತ್ಯಗಳನ್ನು ಮಾಡಲಾಗುತ್ತಿದೆ. ನೃತ್ಯದಲ್ಲಿ ಸಾಪೇಕ್ಷ ನಿರಾಪೇಕ್ಷ ಭಾವದಿಂದ ಪರಮಾತ್ಮನನ್ನು ಸಂಧಿಸುವ ಅವಕಾಶವಿರುತ್ತದೆ. ಈ ಕಾರಣದಿಂದಾಗಿ ನೃತ್ಯ ಕಲಿಯುವ ಹಾಗೂ ಪ್ರದರ್ಶಿಸುವ ಕಲಾವಿದರ ಚಿಂತನೆಗಳು ಸತ್ವಯುತವಾಗಿದ್ದು ಭಾರತೀಯ ಸನಾತನ ಸಂಸ್ಕೃತಿಯ ದ್ಯೋತಕವಾಗಿರುತ್ತದೆ ಎಂದು ಪ್ರತಿಪಾದಿಸಿದರು.



ಕಾರ್ಯಾಗಾರದಲ್ಲಿ ನಗರದ 20ಕ್ಕೂ ಹೆಚ್ಚು ವಿದ್ವತ್ ದರ್ಜೆ ನೃತ್ಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ವಿದುಷಿ ರೂಪಶ್ರೀ ಮಧು ಸೂದನ್‌ರವರನ್ನು ಸನ್ಮಾನಿಸ ಲಾಯಿತು. ಧಾರಾವಾಡದ ನೃತ್ಯ ಶಿಕ್ಷಕಿ ವಿದುಷಿ ನಾಗರತ್ನ ಹಡಗಲಿಯವರು ಹಾಗೂ ಅಧ್ಯಕ್ಷರಾದ ಸುಮಪ್ರಸಾದ್ ರವರು ಉಪಸ್ಥಿತರಿದ್ದರು. ಕು|| ಪ್ರಣಿತ ರಘುರಾಮ್‌ರವರು ಕಾರ್ಯಕ್ರಮ ನಿರೂಪಿಸಿದರು.



*ತುಮಕೂರಿನ ಆಯಿಲ್ ಮಿಲ್ ರಸ್ತೆಯಲ್ಲಿರುವ ಶ್ರೀ ರಾಜರಾಜೇಶ್ವರಿ ಶ್ರೀ ಗಂಗಾಭವಾನಿ ದೇವಾಲಯದಲ್ಲಿ ಶ್ರೀ ಗಂಗಾಭವಾನಿ ಮಹಿಳಾ ಸಹಕಾರ ಸಂಘ ನಿ., ಇದರ 2018ರ ದಿನದರ್ಶಿಕೆಯನ್ನು ದೇವಾಲಯದ ಪ್ರಧಾನ ಅರ್ಚಕರು, ಸಹಕಾರ ಸಂಘದ ಅಧ್ಯಕ್ಷರಾದ ಟಿ.ಎ.ಗಂಗಮ್ಮನವರು ದೇವಸ್ಥಾನದ ಆವರಣದಲ್ಲಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಸಹಕಾರ ಸಂಘದ ನಿರ್ದೇಶಕರುಗಳು, ಸದಸ್ಯರುಗಳು, ಭಕ್ತಾದಿಗಳು ಭಾಗವಹಿಸಿದ್ದರು.*

# ಜನರಲ್ಲಿ ಧಾರ್ಮಿಕ ಶ್ರದ್ಧೆ ಇದ್ದಾಗ ಶಾಂತಿ-ನೆಮ್ಮದಿ ಸಾಧ್ಯ

ಕೊರಟಗೆರೆ

ಭಕ್ತಿ-ಭಾವ ಮತ್ತು ಧಾರ್ಮಿಕ ಶ್ರದ್ಧೆ ಜನರಲ್ಲಿ ಮೂಡಿದಾಗ ಮಾತ್ರ ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸಲು ಸಾಧ್ಯ ಎಂದು ಎಡೆಯೂರು ಕ್ಷೇತ್ರದ ಶ್ರೀ ರೇಣುಕಾಚಾರ್ಯ ಮಹಾಸ್ವಾಮೀಜಿಗಳು ತಿಳಿಸಿದರು.

ತಾಲ್ಲೂಕಿನ ಕೋಳಾಲ ವಲಯದ ಎಲೆರಾಂಪುರ ಕಾರ್ಯಕ್ಷೇತ್ರದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಬುಧವಾರ ಏರ್ಪಡಿಸಿದ್ದ, ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವಹಿಸಿ ಮಾತನಾಡಿದರು.

ಧಾರ್ಮಿಕತೆ ಮೂಡಿಸುವಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ಒಂದಾಗಿದೆ ಹಾಗೂ ಮನುಷ್ಯನ ಜೀವನದಲ್ಲಿ ನೆಮ್ಮದಿ, ಆರೋಗ್ಯ, ಸಾರ್ಥಕತೆಯನ್ನು ಕಂಡುಕೊಳ್ಳಲು ಧಾರ್ಮಿಕ ಆಚರಣೆಗಳು ಹಾಗೂ ಸನಾತನ ಸಂಪ್ರದಾಯಗಳು ಕೂಡ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಿದರು.

ಶಾಸಕ ಪಿ.ಆರ್. ಸುಧಾಕರಲಾಲ್ ಮಾತನಾಡಿ, ಪೂಜಾ ಕಾರ್ಯಕ್ರಮಗಳಿಂದ ಮನುಷ್ಯನ ಮನಸ್ಸು ಬಲಗೊಳ್ಳುವುದರ ಜೊತೆ ಶುಚಿಗೊಳಿಸುತ್ತದೆ ಹಾಗೂ ವ್ಯಕ್ತಿಯ ಮನಸ್ಥೈರ್ಯ ವೃದ್ಧಿಸುತ್ತದೆ. ಧಾರ್ಮಿಕ ಕಾರ್ಯಕ್ರಮಗಳಿಂದ ನಮ್ಮ ಮುಂದಿನ ಪೀಳಿಗೆಯ ಭವಿಷ್ಯಕ್ಕೆ ಉತ್ತಮ ವಾತಾವರಣವನ್ನು ರೂಪಿಸಿಕೊಡಲು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.



*ಮಹಾತ್ಮ ಗಾಂಧೀಜಿಯವರ ಕನಸನ್ನು ಹೆಗಡೆಯವರು ನನಸು ಮಾಡುತ್ತಿದ್ದಾರೆ. ಜಾತಿ, ಮತ, ಭೇದವಿಲ್ಲದೆ ಸಮಾಜ ಅಭಿವೃದ್ಧಿಯಾಗಬೇಕು ಎಂದು ಧರ್ಮಸ್ಥಳ ಸಂಸ್ಥೆ ಶ್ರಮಿಸುತ್ತಿದ್ದು, ಸ್ವಸಹಾಯ ಸಂಘಗಳನ್ನು ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿಸಿ ಸದಸ್ಯರಿಗೆ ವಿವಿಧ ನೆರವು ನೀಡುವ ಮೂಲಕ ಅಭಿವೃದ್ಧಿ ಆಗುವಂತೆ ಮಾಡುತ್ತಿದ್ದಾರೆ.*
*ಪಿ.ಆರ್. ಸುಧಾಕರಲಾಲ್, ಶಾಸಕ*

ಕಾರ್ಯಕ್ರಮದಲ್ಲಿ ತಾಪಂ ಸದಸ್ಯರಾದ ಬೋರಣ್ಣ, ಉಮೇಶ್, ಗ್ರಾಪಂ ಸದಸ್ಯ ಸೀತಾರಾಮಯ್ಯ, ಪುರೋಹಿತರಾದ ರುದ್ರೇಶ್, ಶಿವಣ್ಣ, ಪೂಜಾ ಸಮಿತಿ ಗೌರವ ಅಧ್ಯಕ್ಷ ಆರ್.ಎಸ್.ರಾಜಣ್ಣ, ವೇದಾಂಭ, ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಬಿ.ಶ್ರೀನಿವಾಸ್, ಮೇಲ್ವಿಚಾರಕ ಜೆ.ಕೆ.ಸುರೇಶ್. ವಲಯದ ಎಲ್ಲಾ ಸೇವಾ ಪ್ರತಿನಿಧಿಗಳು, ಒಕ್ಕೂಟದವರು, ನವಜೀವನ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

## ಜೂಜುನಿರತ ನಾಲ್ಕು ಜನರ ಬಂಧನ

ಮಿಡಿಗೇಶಿ

ಮಧುಗಿರಿ ತಾಲ್ಲೂಕಿನ ಮಿಡಿಗೇಶಿಯಿಂದ ಹನುಮಂತಪುರ ಗ್ರಾಮಕ್ಕೆ ಹಾದು ಹೋಗುವ ಪಿ.ಡಬ್ಲ್ಯೂ.ಡಿ. ರಸ್ತೆಯ ಪಕ್ಕದ ಮಾರಿದಿನ್ನೆಯ ಬಳಿಯ ಮರದ ಕೆಳಗಡೆ ಜೂಜಾಟ ನಡೆಯುತ್ತಿದೆ ಎಂಬ ದೂರವಾಣಿಯ ಖಚಿತ ಸುಳಿವಿನ ದೂರಿನನ್ವಯ ಮಿಡಿಗೇಶಿ ರಕ್ಷಣಾ ಸಿಬ್ಬಂದಿಯವರು ಹಠಾತ್ತನೆ ಜೂಜು ಕೇಂದ್ರದ ಮೇಲೆ ದಾಳಿಮಾಡಿದಾಗ ಜೂಜಾಟದಲ್ಲಿ ತೊಡಗಿದ್ದಂತಹ ನಾಲ್ಕು ಜನರನ್ನು ಬಂಧಿಸಿದ್ದು, ಬಂಧಿತರಿಂದ ಪಣಕ್ಕಿಟ್ಟಿದ್ದ 2850-00 ರೂ. ಹಣವನ್ನು ಹಾಗೂ ಪರಿಕರಗಳನ್ನು ವಶಪಡಿಸಿಕೊಂಡು ಬಂಧಿತರ ಮೇಲೆ ಪ್ರಕರಣವನ್ನು ಪೊಲೀಸಿನವರು ದಾಖಲಿಸಿಕೊಂಡಿದ್ದು, ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತಾರೆ.



*ಹೆಬ್ಬೂರು ಹೋಬಳಿಯ ಚಿಕ್ಕಣಸ್ವಾಮಿದೇವಾಲಯದ ಧರ್ಮದರ್ಶಿಗಳಾದ ಪಾಪಣ್ಣರವರ ಹುಟ್ಟುಹಬ್ಬದ ಅಂಗವಾಗಿ ಮಾಜಿ ಶಾಸಕರಾದ ಡಿ.ಸಿ.ಗೌರಿಶಂಕರ್‌ರವರು, ಗೂಳೂರು ಕ್ಷೇತ್ರದ ಜೆಡಿಎಸ್ ಅಧ್ಯಕ್ಷರಾದ ಪಾಲನೇತ್ರಯ್ಯ, ಜಿಲ್ಲಾ ಯುವ ಜೆಡಿಎಸ್ ಅಧ್ಯಕ್ಷರಾದ ಮಹೇಶ್ ಹಿರೇಹಳ್ಳಿ, ಆಲನೂರು ಅನಂತ್, ಕೆಂಪರಾಜಯ್ಯ (ವಕೀಲರು), ವೈ.ಟಿ.ನಾಗರಾಜ್ ಮತ್ತು ಜೆಡಿಎಸ್ ಕಾರ್ಯಕರ್ತರುಗಳು ಮೈಸೂರು ಪೇಟ ತೊಡಿಸಿ, ಪುಷ್ಪಹಾರವನ್ನು ಹಾಕುವುದರೊಂದಿಗೆ ಶುಭಕೋರಿದರು.*



*ತುಮಕೂರು ನಗರದ ಸರ್ಕಾರಿ ಜೂನಿಯರ್ ಕಾಲೇಜಿನ ಆವರಣದಲ್ಲಿ ನಡೆದ ಕೌಶಲ್ಯಅಭಿವೃದ್ಧಿ ಮತ್ತು ಉದ್ಯೋಗ ಮೇಳದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಜಿ.ಪಿ.ದೇವರಾಜು ಕೆ.ಆರ್.ರಾಜಕುಮಾರ್ ಜಾವೇದ್‌ಕರಿಂಗ ರಂಗೇಗೌಡ, ರಾಜಶೇಖರ್ ನಾಗೇಶ್, ಅಂಬೇಡ್ಕರ್ ನಿಗಮ ಮಂಡಳಿ, ರೂಪ, ಮಂಟೇಸ್ವಾಮಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ನಾಗರಾಜು ಹಾಗೂ ಮುಂತಾದವರು ಭಾಗವಹಿಸಿ ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಿದರು.*

# ಕುಡಿಯುವ ಶುದ್ಧ ನೀರಿಗಾಗಿ ಆಂದೋಲನ ಶ್ಲಾಘನೀಯ

ತುಮಕೂರು

ರಾಜ್ಯದ ಪ್ರತಿಯೊಬ್ಬರೂ ಇಂದು ಕುಡಿಯುವ ಶುದ್ಧ ನೀರಿಗಾಗಿ ಪರಿತಪಿಸುವಂತಾಗಿದೆ. ನೀರಿನ ಸೆಲೆಗಳು ಬತ್ತುತ್ತಿವೆ. ಎಲ್ಲಿ ನೋಡಿದರೂ ಕಲುಷಿತಗೊಂಡ ಮತ್ತು ಪ್ಲೋರೈಡ್‌ಯುಕ್ತ ನೀರೇಕಾಣಬರುತ್ತಿದೆ. ಆಳಕ್ಕೆ ಹೋದಂತೆಲ್ಲಾ ಹಲವು ರಸಾಯನಿಕ ಲವಣಯುಕ್ತ ನೀರು ಬರುತ್ತಿದೆ. ಇದರಿಂದ ಮನುಷ್ಯನ ಆರೋಗ್ಯ ಹದಗೆಡುತ್ತಿದೆ. ಕುಡಿಯುವ ನೀರಿನ ಮೂಲಗಳನ್ನು ಸಂರಕ್ಷಿಸಿಕೊಳ್ಳದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ ಅದಕ್ಕಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಮಹಾತ್ಮಾಗಾಂಧಿ ರೂರಲ್ ಡೆವಲಪ್‌ಮೆಂಟ್ ಅಂಡ್‌ಯೂತ್ ವೆಲ್‌ಫೇರ್ ಸೆಂಟರ್‌ರವರ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ಅರಿವಿನ ಆಂದೋಲನ ಶ್ಲಾಘನೀಯವಾದುದ್ದು ಎಂದು ಜಿಲ್ಲಾ ಪಂಚಾಯ್ತಿಯ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಅಧ್ಯಕ್ಷ ಪಾಪಣ್ಣ ತಿಳಿಸಿದರು.

*ಕುಡಿಯುವ ನೀರು ಮತ್ತು ನೈರ್ಮಲ್ಯ ಈ ಎರಡನ್ನು ನಾವು ಸಮಾನವಾಗಿ ನಡೆಸಿಕೊಂಡು ಹೋಗಬೇಕು ದೇಶದ ಮೌಲ್ಯ ಹೆಚ್ಚಿಸಬೇಕಾದರೆ ಶುದ್ದನೀರು, ಮಳೆಕೊಯ್ಲು, ಶೌಚಾಲಯ, ಗ್ರಾಮ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಅದಕ್ಕಾಗಿ ಇಲಾಖೆ ಎಂ.ಜಿ.ಆರ್.ಡಿ.ಎಸ್. ಸಂಸ್ಥೆ ಸಹಾಯದಿಂದ ಈ ಆಂದೋಲನ ನಡೆಸುತ್ತಿದ್ದೇವೆ.*
*ಬಿ.ಪಿ. ನಾಗರಾಜ್, ಎ.ಇ.ಇ ತುಮಕೂರು*



ಅವರು ಪಾವಗಡ ತಾಲ್ಲೂಕಿನ ಲಿಂಗದಹಳ್ಳಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಮಹಾತ್ಮಾಗಾಂಧಿ ರೂರಲ್ ಡೆವಲಪ್‌ಮೆಂಟ್ ಅಂಡ್ ಯೂತ್ ವೆಲ್‌ಫೇರ್ ಸೆಂಟರ್‌ರವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಐ.ಇ.ಸಿ.ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಕಾರ್ಯಕ್ರಮಕ್ಕೆ ಉದ್ಘಾಟನೆಗೆ ಆಗಮಿಸಿದ್ದ ತುಮಕೂರು ವಿಭಾಗದ ಎ.ಇ.ಇ ಬಿ.ಪಿ. ನಾಗರಾಜ್‌ರವರು ಕುಡಿಯುವ ನೀರು ಮತ್ತು ನೈರ್ಮಲ್ಯ ಈ ಎರಡನ್ನು ನಾವು ಸಮಾನವಾಗಿ ನಡೆಸಿಕೊಂಡು ಹೋಗಬೇಕು ದೇಶದ ಮೌಲ್ಯ ಹೆಚ್ಚಿಸಬೇಕಾದರೆ ಶುದ್ದನೀರು, ಮಳೆಕೊಯ್ಲು, ಶೌಚಾಲಯ, ಗ್ರಾಮ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಅದಕ್ಕಾಗಿ ಇಲಾಖೆ ಎಂ.ಜಿ.ಆರ್.ಡಿ.ಎಸ್. ಸಂಸ್ಥೆ ಸಹಾಯದಿಂದ ಈ ಆಂದೋಲನ ನಡೆಸುತ್ತಿದ್ದೇವೆ ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಎಂ.ಜಿ.ಆರ್.ಡಿ.ಎಸ್. ಸಂಸ್ಥೆ ಕಾರ್ಯದರ್ಶಿ ಉಮೇಶ್ ಕುಮಾರ್ ನೀರಿನ ಶುದ್ದತೆ ಅದಕ್ಕಾಗಿ ಸರ್ಕಾರಗಳು ಹೆಚ್ಚುಗಮನ ನೀಡಿರುವುದನ್ನು ನಾವು ಬೀದಿನಾಟಕ, ಗೋಡೆ ಬರಹ, ಶಾಲಾ ಮಕ್ಕಳಲ್ಲಿ ಚರ್ಚಾಸ್ಪರ್ಧೆ ಮತ್ತು ಪ್ರಬಂಧ ಸ್ಪರ್ದೆ ಮತ್ತುರ‍್ಯಾಲಿ ಏರ್ಪಡಿಸುವ ಮೂಲಕ ಮಕ್ಕಳಲ್ಲಿ ಜಾಗೃತಿ ತಂದು ಅವರ ಮೂಲಕ ಪೋಷಕ ವರ್ಗವನ್ನು ಎಚ್ಚರಿಸುವ ಸಲುವಾಗಿ ಈ ಕಾರ್ಯಕ್ರಮ ಅಳವಡಿಸಿದ್ದೇವೆ. ಸರ್ಕಾರದ ಈ ಉದ್ದೇಶವನ್ನು ಪ್ರಾಮಾಣಿಕವಾಗಿ ಜನರಿಗೆ ತಲುಪಿಸಲು ಎಂ.ಜಿ.ಆರ್.ಡಿ.ಎಸ್. ಸಂಸ್ಥೆ ಪ್ರಯತ್ನಿಸುತ್ತಿದೆ ಎಂದರು. ಈ ಸಂದರ್ಭದಲ್ಲಿ ಕೆಂಪನದೊಡ್ಡೇರಿ ಈರಣ್ಣರವರು ಕಾರ್ಯಕ್ರಮದ ಸಂಯೋಜಕರಾಗಿದ್ದು ತುಮಕೂರು, ಕೊರಟಗೆರೆ, ಮಧುಗಿರಿ, ಪಾವಗಡ, ಶಿರಾ ತಾಲ್ಲೂಕುಗಳಲ್ಲಿ ಒಂದೇಅವಧಿಗೆ ಶಾಲೆಗಳಲ್ಲಿ ಅರಿವಿನ ಕಾರ್ಯಕ್ರಮ ನಡೆಸುತ್ತಿದ್ದೇವೆ. ನಂತರ ಗ್ರಾಮಪಂಚಾಯ್ತಿ ಸದಸ್ಯರ ತರಬೇತಿ, ವಿ.ಡಬ್ಲ್ಯೂ ಎಸ್.ಸಿ. ಸದಸ್ಯರ ತರಬೇತಿ, ಸ್ವ-ಸಹಾಯ ಸಂಘಗಳ ಜಾಗೃತಿ ಕಾರ್ಯಕ್ರಮವನ್ನು ಜನವರಿಯಿಂದ ಮಾರ್ಚ್ ವರೆಗೆ ಆಂದೋಲನ ರೀತಿ ನಡೆಸಬೇಕಾಗಿದೆ. ಇದಕ್ಕೆ ಎಲ್ಲರ ಸಹಕಾರ ಅವಶ್ಯಕತೆಯಿದೆ. ಪ್ರಸ್ತುತ ಶಿಕ್ಷಣ ಇಲಾಖೆಯ ಸಹಕಾರ ಚನ್ನಾಗಿ ಸಿಕ್ಕಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಬಿ.ಇ.ಓ ಕುಮಾರಸ್ವಾಮಿ ಶಾಲಾ ಜಾಗೃತಿ ಕಾರ್ಯಕ್ರಮಗಳನ್ನು ಶ್ಲಾಘಿಸಿದರು. ಎಸ್.ಡಿ.ಎಂ.ಸಿ. ಅಧ್ಯಕ್ಷ ಜಾಕೀರ್, ಜೆ.ಇ.ಮಂಜುನಾಥ್, ಜೆ.ಇ.ಮುಸ್ತಾಫಾ, ಶಾಲಾ ಮುಖ್ಯಶಿಕ್ಷಕಿ ಲಕ್ಷ್ಮಮ್ಮ, ಶಿಕ್ಷಕಕ ಸಂಘದ ಅಧ್ಯಕ್ಷ ರಂಗಸ್ವಾಮಿ ತಾಲ್ಲೂಕು ಪಂಚಾಯ್ತಿ ಸದಸ್ಯ ಸಣ್ಣಾರೆಡ್ಡಿ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಶಾಲಾ ಶಿಕ್ಷಕ ರಾಮಾಂಜನೇಯ ಸ್ವಾಗತಿಸಿ ಸಂಸ್ಥೆ ಕಾರ್ಯಕರ್ತ ಗಿರಿರಾಜು ವಂದಿಸಿದರು.



*ತುಮಕೂರು ಗ್ರಾಮಾಂತರ ಗೂಳೂರು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ಗಳಿಗೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಜೆಡಿಎಸ್‌ನ ಹಿರಿಯ ಬೂತ್ ಮಟ್ಟದ ಕಾರ್ಯಕರ್ತರ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಯಲ್ಲಿ ಮಾಜಿ ಶಾಸಕರು ಹಾಗೂ ಜೆಡಿಎಸ್ ಮುಖಂಡರಾದ ಡಿ.ಸಿ.ಗೌರಿಶಂಕರ್‌ರವರು, ಗೂಳೂರು ಕ್ಷೇತ್ರದ ಜೆಡಿಎಸ್ ಅಧ್ಯಕ್ಷರಾದ ಪಾಲನೇತ್ರಯ್ಯ, ಜಿಲ್ಲಾ ಯುವ ಜೆಡಿಎಸ್ ಅಧ್ಯಕ್ಷರಾದ ಮಹೇಶ್ ಹಿರೇಹಳ್ಳಿ, ಜಿಲ್ಲಾ ಮಹಿಳಾ ಜೆಡಿಎಸ್ ಉಪಾಧ್ಯಕ್ಷರಾದ ಸತ್ಯವತಿ ಸುರೇಶ್, ಆಲನೂರು ಅನಂತ್, ಕೃಷ್ಣಪ್ಪ, ಜೆಡಿಎಸ್‌ನ ಹಿರಿಯ ಉಪಾಧ್ಯಕ್ಷರಾದ ಧರ್ಮೇಗೌಡ ಹಾಗೂ ಅಪಾರ ಸಂಖ್ಯೆಯ ಜೆಡಿಎಸ್ ಕಾರ್ಯಕರ್ತರುಗಳು ಭಾಗವಹಿಸಿದ್ದರು.*